

### ಆರೋಗ್ಯದ ಕಾಳಜಿ

'ಸುಧಾ' ಜ.9ರ ಮುಖಪುಟ ಲೇಖನ ಡಾ.ಎಚ್.ಎಸ್.ಪ್ರೇಮಾ ಅವರ 'ನೀವು ವಿಷ ತಿನ್ನುತ್ತಿದ್ದೀರಾ?' ಆರೋಗ್ಯದ ಬಗ್ಗೆ ಕಾಳಜಿ ಇರುವವರೆಲ್ಲರೂ ಮನದಟ್ಟು ಮಾಡಿಕೊಳ್ಳಬೇಕಾದ ಸಂಗತಿ.

– ಹೇಕಮಂ ಮಧ್ಯಸ್ತ, ಫಲ್ಗುಣಿ/ ಹೇಮಾ ಮುರುಳಿ, ಕೋಣಂದೂರು/ ಮೇ.ಗೋ.ಸುಬ್ಬಣ್ಣ, ಮೇಗರವಳ್ಳಿ/ ಓಂ ಚನ್ನೇಶ್ ಅರೆಬಿಳಚಿ/ ಬಿ.ಎನ್.ಸೊಲ್ಲಾಪುರೆ, ಕಮಲನಗರ/ ವಿಜಯಾ, ರಮ್ಯಾ ಬೆಳ್ಳಾವೆ/ ಸು.ವಿಜಯಲಕ್ಷ್ಮಿ, ಶಿವಮೊಗ್ಗ/ ಎಂ.ಮೃತ್ಯುಂಜಯಪ್ಪ, ಚಿತ್ರದುರ್ಗ

### ಇವೆಲ್ಲವೂ ಇಷ್ಟ

ಮುಖಪುಟ ಲೇಖನದ ಜತೆಗೆ ಚೀಮುಳ್ಳು, ಜಿ.ಎಸ್.ಎಸ್., ಫ್ಲಾಮ್ ಪಟ್ಟಣ, ವಿವೇಕಾನಂದ ಸ್ಮಾರಕ, ಪತ್ರ ಸಂಸ್ಕೃತಿ, ಕಥೆ, ಟಿವಿ, ಎಳೆಯರ ಅಂಗಳ, ವಂಡರ್ ಪುಟ –ಇವೆಲ್ಲವೂ ಇಷ್ಟವಾದವು.

–ವೈ.ಎಂ.ಚಂದ್ರಶೇಖರ್ ಕೂಡಿಗೆ, ಕುಶಾಲನಗರ

### ಉಪಯುಕ್ತ ಮಾಹಿತಿ

'ಔಷಧೀಯ ಗುಣಗಳ ಚೀಮುಳ್ಳು' ಸಿ.ಎಸ್.ಸುರೇಶ್‌ರ ಚಿತ್ರ–ಬರಹ ಉಪಯುಕ್ತ ಮಾಹಿತಿ ನೀಡಿತು.

–ಮರಿಸ್ಸಾ. ಪಿ. ಗೊನ್ಸಾಲ್ವಿಸ್, ಹೊನ್ನಾವರ

### ಭಿನ್ನ ವಿಚಾರ ಲಹರಿ

ಧಾರಾವಾಹಿಗಳ ಕುರಿತ ವೈನತೇಯರ ವಿಚಾರ ಲಹರಿ ಈ ಬಾರಿ ಅಪರೂಪದ ವಿಷಯದಿಂದ ಭಿನ್ನವಾಗಿದೆ. 'ಮಾತೇ ಮುತ್ತು' ಸಿಂಧೂರ ತಿಲಕದಂತೆ ಆಕರ್ಷಿಸುತ್ತದೆ.

–ಎಸ್.ಲಕ್ಷ್ಮೀನರಸಿಂಹ, ಚಾಮರಾಜನಗರ/ ಜಿ. ಸರೋಜಮ್ಮ, ನೆ.ಲ.ರಾಂ., ಬೆಳ್ಳಾವೆ ರಮೇಶ್, ಬೆಂಗಳೂರು

### ಆಪ್ತ ಬರಹ

'ಬದುಕ ಕಲಿಸಿದ ಹಿರಿ ಜೀವ' ಜಿ.ಎಸ್.ಶಿವರುದ್ರಪ್ಪ(ಜಿಎಸ್ಎಸ್)ರ ಕುರಿತ ಬರಹ ಆಪ್ತವಾಗಿತ್ತು.

–ಎಚ್.ಆನಂದಕುಮಾರ್, ಬಿ.ಮೊಹಿದ್ದಿನ್ ಖಾನ್, ಚಿತ್ರದುರ್ಗ/ ರುದ್ರೇಶ್ ಬಿ.ಅದರಂಗಿ, ಬೆಂಗಳೂರು/ ವೈ.ಹನುಮಂತಪ್ಪ, ದಾವಣಗೆರೆ

### ವಿಚಿತ್ರವಾದರೂ, ವಾಸ್ತವ

'ದಿ ಟೀಚರ್' ಕಮಲಾ ನರಸಿಂಹರ ಕಥೆ ವಾಸ್ತವಕ್ಕೆ ಹತ್ತಿರವಾಗಿದೆ. ಶಿಕ್ಷಕ ವೃತ್ತಿ ಜೀವನದಲ್ಲಿ ಇಂತಹ ಒಂದೆರಡು ಘಟನೆಗಳನ್ನು ಹತ್ತಿರದಿಂದ ಕಂಡಿದ್ದೇನೆ. ಕೆಲವರು ಸಿನಿಮಾ ನಟರ ಬಗ್ಗೆ ಹೀಗೆ ವರ್ತಿಸುತ್ತಾರೆ.

–ರೇಷ್ಮಾ ಎ.ಎಸ್., ಬಾಳೆಹೊನ್ನೂರು/ ಎಸ್.ನಿತ್ಯ, ಮೂಡಬಿದಿರೆ

### ಕಥೆಯ ಅಂತ್ಯ ಅಪೂರ್ಣ

ಕಮಲಾ ನರಸಿಂಹರ ಕಥೆ 'ದಿ ಟೀಚರ್' ಕಥೆಯ ಅಂತ್ಯ ಅಪೂರ್ಣವೆನಿಸಿತು.

–ಎಸ್. ಪ್ರಭಾ, ಬೆಂಗಳೂರು

### ಮತ್ತೊಂದು 'ಸುಧಾ' ಖರೀದಿಸಿದೆ

ಫ್ಲಾಮ್ ಪಟ್ಟಣದ ರೈಲು ಮಾರ್ಗ ನಿಜವಾಗಿಯೂ ಜಗತ್ತಿನ ಅತಿ ಸುಂದರ ರೈಲು ಮಾರ್ಗ. ಇದರ ಪಕ್ಕದ ಪುಟದಲ್ಲೇ ಹುಲಿರಾಯನ ಆಕರ್ಷಕ ಕ್ಯಾಲೆಂಡರ್, ಅದರ ನಂತರ ವಿವೇಕಾನಂದ ಸ್ಮಾರಕದ ಕುರಿತ ಲೇಖನ. ಈ ತ್ರಿವೇಣಿ ಸಂಗಮದಿಂದ ಉಂಟಾದ ಸಮಸ್ಯೆ ಎಂದರೆ ಕ್ಯಾಲೆಂಡರ್ ಅನ್ನು ಬೇರ್ಪಡಿಸುವುದು ಹೇಗೆಂದು? ಹಾಗೆ ಮಾಡಿದರೆ ಎರಡು ಉತ್ತಮ ಲೇಖನಗಳನ್ನು ಕಳೆದುಕೊಳ್ಳಬೇಕಾಗುತ್ತದಲ್ಲ... ಕೊನೆಗೆ ರಗಳೆಯೇ ಬೇಡವೆಂದು ಇನ್ನೊಂದು 'ಸುಧಾ' ಖರೀದಿಸಿದೆ.

–ದೀಪಕ್, ಕಂಬದಕೋಣೆ




